**ಕರ್ನಾಟಕ ವಿಧಾನ ಪರಿಷತ್ತು**

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 835
2. ಸದಸ್ಯರ ಹೆಸರು : ಶ್ರೀ ಕುಶಾಲಪ್ಪಎಂ. ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸ ಬೇಕಾದ ದಿನಾಂಕ : 22.02.2024
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯ ಮಂತ್ರಿಗಳು

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಹಾರಂಗಿ ಜಲಾನಯನ ಅಭಿವೃದ್ಧಿಗಾಗಿ ಈ ಹಿಂದೆ ಬಿಡುಗಡೆಯಾದ 130.00ಕೋಟಿ ಅನುದಾನದ ಕಾಮಗಾರಿ ಯಾವ ಹಂತದಲ್ಲಿದೆ; | • ಹಾರಂಗಿ ಜಲಾನಯನ ಪ್ರದೇಶ ಮತ್ತು ನದಿ ಪಾತ್ರದ ಪುನಶ್ಚೇತನ ಹಾಗೂ ರಕ್ಷಣಾ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಶ್ರೀ ಮಧುಕರ್ ದಗ್ದುಜೀ ದೇಶಮುಖ್, (ಮೆ\|\| ಶಿವಸ್ಟ್ರಕ್ಚರ್ಸ್ ಪ್ರೈವೇಟ್ ಲಿಮಿಟೆಡ್) ಔರಂಗಾಬಾದ್, ಮಹಾರಾಷ್ಟ್ರ ಇವರಿಗೆ ದಿನಾಂಕ:09.09.2022 ರಂದು ರೂ.155.42 ಕೋಟಿ(ಜಿ.ಎಸ್.ಟಿ. ಒಳಗೊಂಡಂತೆ) ಮೊತ್ತಕ್ಕೆ ಗುತ್ತಿಗೆ ವಹಿಸಲಾಗಿರುತ್ತದೆ. |
| ಆ | ಸದರಿ ಕಾಮಗಾರಿಯ ಗುತ್ತಿಗೆಯನ್ನು ಯಾವ ಕಂಪನಿಗೆ ನೀಡಲಾಗಿದೆ; | |
| ಇ | ಕಾಮಗಾರಿಗೆ ಪ್ರಸ್ತುತ ಬಳಸಲಾಗಿರುವ ಅನುದಾನ, ಬಾಕಿ ಇರುವ ಮೊತ್ತ, ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ಸಂಪೂರ್ಣ ಮಾಹಿತಿಯನ್ನು ನೀಡುವುದು? | • ಹಾರಂಗಿ ಅಣೆಕಟ್ಟೆಯ ಹಿನ್ನೀರಿನ FRL ನಲ್ಲಿ ಶೇಖರಣೆಯಾಗಿರುವ ಹೂಳು ಮಿಶ್ರಿತ ಮಣ್ಣನ್ನು ಹೊರ ತೆಗೆಯಲು, ಜಲಾಶಯಕ್ಕೆ ಹರಿದು ಬರುವ ಉಪ ನದಿಗಳಾದ ಹಟ್ಟಿಹೊಳೆ, ನಂದಿಮೊಟ್ಟೆ ಮತ್ತು ಹಮ್ಮಿಯಾಲ ನದಿ ಪಾತ್ರದ ದಂಡೆಗಳ ಸಂರಕ್ಷಣೆಗಾಗಿ ಗೇಬಿಯನ್ ವಾಲ್ ಗಳಿಂದ ಹಾಗೂ ಪೈಪುಗಳಿಂದ ತಡೆಗೋಡೆ ನಿರ್ಮಿಸಲು ಹಾಗೂ ಜಲಾಶಯಕ್ಕೆ ಹೂಳು ಪುನ: ಪ್ರವೇಶಿಸದಂತೆ ತಡೆಯಲು ಉಪನದಿಗಳಿಗೆ ಗೇಬಿಯನ್ ನಿಂದ ಚೆಕ್ ಡ್ಯಾಂ ನಿರ್ಮಿಸಲು, ರೀಟೈನಿಂಗ್ ವಾಲ್ ಹಾಗೂ ಬ್ರಿಡ್ಜ್ ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ.<br>• ಪ್ರಸ್ತುತ, ಬ್ರಿಡ್ಜ್ ನಿರ್ಮಾಣ ವಿನ್ಯಾಸವು ಅನುಮೋದನೆಗೊಂಡಿದ್ದು, ಸಿಂಗಲ್ ಲೇನ್ ಬ್ರಿಡ್ಜ್ ಕಾಮಗಾರಿಯು ಪ್ರಗತಿಯಲ್ಲಿದೆ. ಹಾರಂಗಿ ಜಲಾನಯನ ಪ್ರದೇಶದಲ್ಲಿ ಹೂಳು ತೆಗೆಯಲು ಸರ್ವೆ ಮುಖೇನ ಪ್ರಿ-ಲೆವೆಲ್ಸ್ ರಿಮೂವಲ್ ಪ್ಲ್ಯಾನ್ ಗಳ ತಯಾರಿಕೆಯು ಪ್ರಗತಿಯಲ್ಲಿರುತ್ತದೆ. ನದಿ ಪಾತ್ರದ ದಂಡೆಗಳ ಸಂರಕ್ಷಣೆಗಾಗಿ ಗೇಬಿಯನ್ ಟೈಪ್ ವಾಲ್ ಮತ್ತು ರಿಟೈನಿಂಗ್ ವಾಲ್ ಕಾಮಗಾರಿಯ ವಿನ್ಯಾಸವನ್ನು ಅನುಮೋದನೆ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದೆ.<br>• ಪ್ರಸ್ತುತ ಕಾಮಗಾರಿಗಾಗಿ ರೂ.36.00 ಲಕ್ಷ ವೆಚ್ಚ ವಾಗಿರುತ್ತದೆ. |

**ಸಂಖ್ಯೆ: ಜಸಂಇ 17 ಎನ್‌ಎಲ್‌ಎ 2024**

**(ಡಿ. ಕೆ. ಶಿವಕುಮಾರ್)**
**ಉಪ ಮುಖ್ಯ ಮಂತ್ರಿಗಳು**